"Faith is a knowledge within the heart, beyond the reach of proof..."

—Kahlil Gibran

ವಾರದಿಂದ ಜನಪ್ರತಿನಿಧಿಗಳನ್ನು, ಮಾಧ್ಯಮದವರನ್ನು, ವಿವಿಧ ಧಾರ್ಮಿಕ ಸಂಘಟನೆಗಳ ನಾಯಕರನ್ನು ಭೇಟಿ ಮಾಡಿ ಮಾಡಿ ಸಾಕಾಗಿಹೋಗಿತ್ತು. ಎಂಟು ದಿನದಲ್ಲಿ ಎಷ್ಟೊಂದು ಸಭೆಗಳು, ಎಷ್ಟೊಂದು ಸಂಧಾನಗಳು ನಡೆದಿದ್ದು, ನಡೆಸಿದ್ದು. ಎಂಟು ದಿನಗಳ ಹಿಂದೆ ನಡೆದ ಕೊಲೆಯೊಂದು ಕೋಮುಬಣ್ಣ ಹಚ್ಚಿಕೊಂಡು ಇಡೀ ನಗರವನ್ನು ಲಂಗು ಲಂಗಾಮಿಲ್ಲದ ಸೈತಾನನಂತೆ ರಕ್ತ ಕಾರಿಕೊಂಡು ಕುಣಿದಾಡಿತ್ತು. ನಾಲ್ಕು ಜನ ಕೋಮುಗಲಭೆಗೆ ಬಲಿಯಾಗಿದ್ದರಲ್ಲದೆ ಕನಿಷ್ಠ ಇಪ್ಪತ್ತು ಕೋಟಿ ಮೌಲ್ಯದ ಆಸ್ತಿಪಾಸ್ತಿಗಳು ನಾಶವಾಗಿದ್ದವು. ಖುದ್ದು ಮುಖ್ಯಮಂತ್ರಿಗಳೇ ಪ್ರತಿದಿನ ನಾಲ್ಕು ಸಾರಿ ಫೋನ್ ಮಾಡಿ ಪರಿಸ್ಥಿಯ ಬಗ್ಗೆ ವಿಚಾರಿಸುತ್ತಿದ್ದರು. ಇನ್ನು, ಜಿಲ್ಲಾಧಿಕಾರಿಯಿಂದ ಹಿಡಿದು ನಮ್ಮ ಇಲಾಖೆಯ ಮೇಲಧಿಕಾರಿಗಳವರೆಗೂ ನಿರಂತರವಾಗಿ ಫೋನಿನಲ್ಲೆ ಸವಾರಿ ಮಾಡುತ್ತಿದ್ದರು. ಸದ್ಯ, ಎರಡು ದಿನಗಳಿಂದ ಉಂಟಾದ ಸೈಕ್ಲೋನ್ ಕಾರಣದಿಂದಾಗಿ ಎಡಬಿಡದೆ ಸುರಿಯುತ್ತಿರುವ ಮಳೆಯಿಂದಾಗಿಯೂ, ಇಲ್ಲಿನ ಜಿಲ್ಲಾಧಿಕಾರಿ ಯು.ಪಿ.ಎಸ್.ಸಿ ಪರೀಕ್ಷೆಯಲ್ಲಿ ನನ್ನ ಬ್ಯಾಚ್ಮೇಟ್ ಆಗಿದ್ದರಿಂದ ಪೊಲೀಸ್ ಮತ್ತು ರೆವಿನ್ಯೂ ಇಲಾಖೆಯ ಕೋ–ಆರ್ಡಿನೇಷನ್ ಫಲದಿಂದಾಗಿ ಸರ್ವಧರ್ಮ ಮುಖಂಡರ ಸೌಹಾರ್ದ ಸಭೆಯು ಯಶಸ್ವಿಯಾಗಿದ್ದರಿಂದ ಗಲಭೆ ನಿಯಂತ್ರಣಕ್ಕೆ ಬಂದಿತ್ತಾದರೂ ವಾತಾವರಣ ಇನ್ನೂ ಬೂದಿ ಮುಚ್ಚಿದ ಕೆಂಡದಂತಿತ್ತು. ಈ ಎಂಟು ದಿನಗಳಿಂದ ಅವಿರತವಾಗಿ ನನ್ನೊಡನೆ ನಿಂತು ಪರಿಸ್ಥಿತಿ ಸಂಭಾಳಿಸುವುದರಲ್ಲಿ ಧೈರ್ಯದಿಂದ ಶ್ರಮವಹಿಸಿದ ಅಸಿಸ್ಟೆಂಟ್ ಕಮಿಷನರ್ ಪೆದ್ದಚೆರುವು ಮೋಹನ ರಂಗಾರಾವ್ ನನ್ನ ಮನಸ್ಸನ್ನು ಗೆದ್ದುಬಿಟ್ಟಿದ್ದ. ನಾನು ಈ ಜಿಲ್ಲೆಗೆ ಎಸ್.ಪಿ ಆಗಿ ವರ್ಗಾವಣೆಯಾಗಿ ಬಂದು ನಾಲ್ಕು ತಿಂಗಳಾಗಿದೆಯಷ್ಟೆ. ಈ ರಂಗಾರಾವ್ ಕೂಡಾ ಐಪಿಎಸ್ ಪ್ರೊಬೆಷನರಿ ಮುಗಿದು ನಾನಿಲ್ಲಿ ರಿಪೋರ್ಟ್ ಮಾಡಿಕೊಂಡ ವಾರದ ಮೇಲೆ ಬಂದು ಅಸಿಸ್ಟೆಂಟ್ ಕಮಿಷನರ್ ಆಗಿ ಜಾಯಿನ್ ಆಗಿದ್ದ. ಈತನದು ಹೋಂ ಸ್ಟೇಟ್ ಆಗಿದ್ದರಿಂದ ಸ್ಥಳೀಯ ಜನರ ಮಿಡಿತವನ್ನು

